ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–01

ಸಂಖ್ಯೆ:ಇ–ಆಡಳಿತಮಂ.ಹು.ಪ/01/2020–21 ದಿನಾಂಕ:–05–12–2020

**–: ಜ್ಞಾಪನಾ :–**

ವಿಷಯ:– ಶಾಲಾವಾರು ಹುದ್ದೆ–ಶಿಕ್ಷಕರ ಮ್ಯಾಪಿಂಗ್ ಮಾಡಿ ಖಾಲಿಹುದ್ದೆಗಳನ್ನು ಗುರುತಿಸುವ ಬಗ್ಗೆ.

ಉಲ್ಲೇಖ:– ಈ ಕಛೇರಿಯ ಜ್ಞಾಪನಾ: ಇ–ಆಡಳಿತಮಂ.ಹು.ಪ/01/2020–21, ದಿನಾಂಕ:–24/11/2020

––––––

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಪತ್ರದನ್ವಯ ಮ್ಯಾಪಿಂಗ್ ಮತ್ತು ಖಾಲಿಹುದ್ದೆಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ದಿನಾಂಕ:–01/12/2020ರೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿತ್ತು. ಆದರೆ EEDS ನಲ್ಲಿ ಶಿಕ್ಷಕರ ಮಾಹಿತಿಯನ್ನು ಸರಿಯಾಗಿ ಇಂದೀಕರಿಸದ ಕಾರಣದಿಂದ ಮ್ಯಾಪಿಂಗ್ ಪ್ರಕ್ರಿಯೆ ಪೂರ್ಣಗೊಳಿಸಿರುವುದಿಲ್ಲ. ದಿನಾಂಕ:–03–12–2020 ಮತ್ತು ದಿನಾಂಕ:–04–12–2020 ರಂದು EEDS ನಲ್ಲಿ ಶಿಕ್ಷಕರ ಮಾಹಿತಿಯನ್ನು ಇಂದೀಕರಿಸಿದ ನಂತರ ಲಭ್ಯವಿರುವ ಮಾಹಿತಿಯಂತೆ ಮ್ಯಾಪಿಂಗ್ ಪ್ರಕ್ರಿಯೆಗೆ ಅವಕಾಶ ನೀಡಲಾಗಿದೆ. ಎಲ್ಲಾ ಶಾಲೆಗಳ ಮಾಹಿತಿಯನ್ನು ಪರಿಶೀಲಿಸಿ, ಮ್ಯಾಪಿಂಗ್ ಪ್ರಕ್ರಿಯೆಯನ್ನು ದಿನಾಂಕ:–08–12–2020ರೊಳಗೆ ಪೂರ್ಣಗೊಳಿಸಲು ತಿಳಿಸಿದೆ. ಮಾಹಿತಿ ಪರಿಶೀಲನೆ ಸಂದರ್ಭದಲ್ಲಿ ಸರ್ಕಾರದಿಂದ ಮಂಜೂರಾದ ವೃಂದವಾರು ಹುದ್ದೆಗಳ ಸಂಖ್ಯೆಯನ್ನು ಹಾಗೂ ನಿಗದಿಪಡಿಸಿದ ಸಿಬ್ಬಂದಿ ಸ್ಥರವಿನ್ಯಾಸದಲ್ಲಿ ವ್ಯತ್ಯಾಸವಾಗದಂತೆ ಗಮನ ವಹಿಸುವುದು.

ಯಾವುದಾದರೂ ಶಾಲೆಗಳಲ್ಲಿ ಮಂಜೂರಾದ ಹುದ್ದೆಗಳ ಮಾಹಿತಿ ಬಿ.ಇ.ಓ.ರವರ ಹಂತದಲ್ಲಿ ಇಂದೀಕರಿಸದಿರುವುದು ಕಂಡುಬಂದಿದ್ದಲ್ಲಿ ಅಂತಹ ಶಾಲೆಗಳ ಮಾಹಿತಿಯನ್ನು ದಿನಾಂಕ:–07–12–2020 ರಂದು ಬೆಳಗ್ಗೆ 11–30ರೊಳಗೆ ಈ ಪತ್ರದೊಂದಿಗೆ ನೀಡಿರುವ ನಮೂನೆಯಲ್ಲಿಯೇ ನೀಡಲು ತಿಳಿಸಿದೆ. ನಮೂನೆಯಲ್ಲಿ ನೀಡಿದ ಸೂಚನೆಗಳಂತೆ ಕಡ್ಡಾಯವಾಗಿ ಷರಾ ನಮೂದಿಸುವುದು ಹಾಗೂ ಪಟ್ಟಿಯನ್ನು ದೃಢೀಕರಿಸಿದ ಪ್ರತಿ ಮತ್ತು ಎಕ್ಸೆಲ್ ಪ್ರತಿಯೊಂದಿಗೆ transfercellcpi@gmail.com ಗೆ ಈ–ಮೇಲ್ ಮೂಲಕ ಮೇಲೆ ತಿಳಿಸಿದ ಸಮಯದೊಳಗೆ ಸಲ್ಲಿಸುವುದು. ಜಿಲ್ಲೆಯ ಒಟ್ಟು ಪ್ರಕರಣಗಳ ಘೋಷ್ವಾರೆಯನ್ನು ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರು ದೃಢೀಕರಿಸಿರಬೇಕು ಹಾಗೂ ಈ–ಮೇಲ್ ನಲ್ಲಿ ಸಂಬಂಧಿಸಿದ ಅಧಿಕಾರಿಯ ಸಂಪರ್ಕ ಸಂಖ್ಯೆಯನ್ನು ನಮೂದಿಸುವುದು. ಒಂದು ಜಿಲ್ಲೆಯಿಂದ ಕ್ರೋಢೀಕರಿಸಿದ ಒಂದು ಪಟ್ಟಿಯನ್ನು ಮಾತ್ರ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾಗದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ನಿಗದಿತ ವೇಳಾಪಟ್ಟಿಯಂತೆ ವರ್ಗಾವಣೆ ಪ್ರಕ್ರಿಯೆಯನ್ನು ನಡೆಸಲು ಸದರಿ ಕಾರ್ಯವು ಅತ್ಯಂತ ತುರ್ತು ಮತ್ತು ನಿಖರತೆಯಿಂದ ಆಗಬೇಕಾಗಿರುವುದರಿಂದ ವರ್ಗಾವಣಾ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಮಾಹಿತಿ ಪರಿಶೀಲಿಸಿ ಪಟ್ಟಿಯನ್ನು ಸಲ್ಲಿಸಲು ಸೂಚಿಸಿದೆ.

**ನಿರ್ದೇಶಕರು**
**ಉರ್ದು ಹಾಗೂ ಇತರೆ ಭಾಷಾ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶನಾಲಯ**

ಪ್ರತಿಯನ್ನು

1. ಅಪರ ಆಯುಕ್ತರು, ಧಾರವಾಡ ಮತ್ತು ಕಲ್ಬುರ್ಗಿ ಇವರಿಗೆ ಮಾಹಿತಿಗಾಗಿ
2. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು., ಇವರಿಗೆ ಮಾಹಿತಿಗಾಗಿ
3. ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು., ಇವರಿಗೆ ಮಾಹಿತಿಗಾಗಿ
4. ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾವಿ, ಕಲ್ಬುರ್ಗಿ ವಿಭಾಗ ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
5. ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
6. ಕಛೇರಿ ಪ್ರತಿ

## Objections for Post_Teacher Mapping and Vacancy Identification

**District:**

| Sl.No. | School Category | Cadre Group | District | Block | DISE Code | School Name | POST_ID | Working/ Vacant | KGID number if Working | Remarks |
|---|---|---|---|---|---|---|---|---|---|---|
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |

**Note:** 1. Post_ID should be entered as provided in Transfer Software

2. In Remarks column any one should be mentioned properly - **Post to be Added** or **Teacher to be added for mapping**
3. School Category: **Primary / Secondary**
4. Cadre Group: **HM/AM/PET/Special**